# ಇರ್ಫಾನ್ ಪಾತ್ರಗಳು ಕಾಣಿಸುವ ಅನನ್ಯ ಸತ್ಯಗಳು

■ ನಟರಾಜ್ ಹುಳಿಯಾರ್

ಕಲೆ: ಮನೋಹರ ಆಚಾರ್ಯ



ಭಾರತೀಯ ಚಿತ್ರರಂಗ ಕಂಡ ಮಹತ್ವದ ಕಲಾವಿದರಲ್ಲೊಬ್ಬರಾದ ಇರ್ಫಾನ್ ಖಾನ್‌ರ ಸಾಂಸ್ಕೃತಿಕ ವ್ಯಕ್ತಿತ್ವದ ಅನನ್ಯತೆಯನ್ನು ಚಿತ್ರಿಸುವ ಈ ಬರಹ, ಕನ್ನಡದ ಅನನ್ಯ ಕಥೆಗಾರನ ಕಣ್ಣಲ್ಲಿ ಕಂಡಿರುವ ದೇಶದ ಅಪೂರ್ವ ಕಲಾವಿದನೊಬ್ಬನ ಸ್ಮೃತಿಬಿಂಬ.

ಮೊನ್ನೆ ತೀರಿಕೊಂಡ ಅಸಲಿ ಸಿನಿಮಾ ಪ್ರತಿಭೆ ಇರ್ಫಾನ್ ಒಂದೇ ದಿನದ ಮೂರು ಭೇಟಿಯಲ್ಲಿ ನನಗೆ ಪ್ರಿಯರಾಗಿದ್ದು ಅವರೊಬ್ಬ ಸೆಲೆಬ್ರಿಟಿ ನಟರಾದದ್ದರಿಂದ ಅಲ್ಲ; ಬದಲಿಗೆ, ಬಹುಕಾಲದ ಗೆಳೆಯನಂತೆ ಆರಾಮಾಗಿ ನಮ್ಮೊಡನೆ ಅವರು ಬೆರೆತ ರೀತಿಯಿಂದ. ಅವತ್ತು ಇರ್ಫಾನ್ ರಂಗಾಯಣದ 'ಬಹುರೂಪಿ–2016'ರ ಸಮಾರೋಪಕ್ಕೆ ಬಂದಿದ್ದರು. ರಂಗಾಯಣದ ನಿರ್ದೇಶಕರಾಗಿದ್ದ ಜನ್ನಿ ದೆಹಲಿಯ ನ್ಯಾಶನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ಇರ್ಫಾನರಿಗೆ ಸೀನಿಯರ್. ರಂಗನಿರ್ದೇಶಕಿ ಸುಮತಿ ಜನ್ನಿ, ಇರ್ಫಾನ್ ಹಾಗೂ ಅವರ ಪತ್ನಿ ಸುತಾಪರ ಕ್ಲಾಸ್ ಮೇಟ್. ಸಿನಿಮಾ ನೋಡುವುದನ್ನು ಕೂಡ ಒಪ್ಪದ ಕುಟುಂಬದಿಂದ ಬಂದ ಇರ್ಫಾನ್ ನಾಟಕಶಾಲೆ ಸೇರುವುದನ್ನು ಅಮ್ಮ ಒಪ್ಪಿರಲಿಲ್ಲ; 'ಅಲ್ಲಿ ಕಲಿತು ಬಂದು ಲೆಕ್ಚರರ್ ಆಗುತ್ತೇನೆ' ಎಂದು ಅಮ್ಮನನ್ನು ನಂಬಿಸಿ ಇರ್ಫಾನ್ ಎನ್.ಎಸ್.ಡಿ. ಸೇರಿದ್ದರು!

ಐದು ವರ್ಷಗಳ ಕೆಳಗೆ ಪ್ರಸನ್ನ ಕರ್ನಾಟಕದ ಬದನವಾಳಿನಲ್ಲಿ ಶುರು ಮಾಡಿದ್ದ ಸತ್ಯಾಗ್ರಹವನ್ನು ಬೆಂಬಲಿಸಲು ನಿಜವಾದ ಕಾಳಜಿಯಿಂದ ಇರ್ಫಾನ್ ಬಂದಿದ್ದರು. 'ಪ್ರಸನ್ನ ನಿರ್ದೇಶನ ಮಾಡಿದರೆ ರಂಗಭೂಮಿಗೆ ಬಂದು ನಟಿಸುತ್ತೇನೆ' ಎಂದು ಕೂಡ ಹೇಳಿದ್ದರು. ನಮ್ಮ ಭೇಟಿಯಲ್ಲಿ ರಂಗಭೂಮಿಯ ಬಗ್ಗೆ ಇರ್ಫಾನ್ ಹೇಳಿದ ಮಾತು ಗಂಭೀರ ನಟ ನಟಿಯರಿಗೆಲ್ಲ ದಿಕ್ಸೂಚಿಯಂತಿತ್ತು: 'ನಾಟಕದಲ್ಲಿ ಆಕ್ಟ್ ಮಾಡೋಕೆ ನನಗೆ ನಿಜವಾಗಲೂ ಇಷ್ಟ. ಆದರೆ ನಾನು ಇವತ್ತು ನಟನೆ ಮಾಡಿದಂತೆ ನಾಳೆ ಮಾಡಬಾರದು ಎಂಬುದು ನನ್ನ ಆಸೆ' ಎಂದ ಇರ್ಫಾನ್, ನಟನೆ, ಡಯಲಾಗ್ ಡೆಲಿವರಿ ಎಲ್ಲದರಲ್ಲೂ ನಾಳಿನ ಪ್ರಯೋಗ ಬೇರೆಯದೇ ಆಗಿರಬೇಕು ಎಂದು ವಿವರಿಸಿದರು. ಇರ್ಫಾನ್ ಮಾತು ನಾಟಕಕ್ಕಷ್ಟೇ ಅಲ್ಲ, ಎಲ್ಲ ಸೃಜನಶೀಲ ಚಟುವಟಿಕೆಗಳಿಗೂ ಅನ್ವಯಿಸುತ್ತದೆ ಅನ್ನಿಸತೊಡಗಿತು.

ರಂಗಾಯಣದ ಸಮಾರೋಪದಲ್ಲಿ ತಾವೇ ಮಾತಾಡುವ ಬದಲು, ಕಾರ್ಯಕ್ರಮವನ್ನು ಆಡಿಯನ್ಸ್ ಜೊತೆಗಿನ ಮಾತುಕತೆಯನ್ನಾಗಿ ಮಾಡಿದರೆ ಚೆನ್ನಾಗಿರುತ್ತದೆ ಎಂದರು ಇರ್ಫಾನ್. ಆದರೆ ಇರ್ಫಾನ್ ಮಾತಾಡುತ್ತಾ ಹೋದರೆ ನೇರವಾಗಿ ಸತ್ಯ ಹೇಳುತ್ತಾರೆ; ಅದು ಮತ್ತೆಲ್ಲಿಗೋ ಹೋಗಿ ವಿವಾದವಾಗುತ್ತದೆ ಎಂದು ಸುತಾಪ ಎಚ್ಚರಿಸುತ್ತಿದ್ದರು. ಅಷ್ಟೊತ್ತಿಗಾಗಲೇ ಇರ್ಫಾನ್, ಶಾರೂಖ್ ಥರದ ದೊಡ್ಡ ನಟರ ಸಾಮಾಜಿಕ ಪ್ರತಿಕ್ರಿಯೆಗಳಿಗೆ ಮತೀಯ ಬಣ್ಣ ಬಳಿಯುವ ಸೈತಾನ ಕಾರ್ಖಾನೆ ದೇಶದಲ್ಲಿ ದೊಡ್ಡ ಮಟ್ಟದಲ್ಲಿ ಶುರುವಾಗಿತ್ತು.

ಸಭಿಕರ ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ ಇರ್ಫಾನ್, ಈ ದೇಶದಲ್ಲಿ 'ನಾನು ಏನು